ವಾರದ ಪತ್ರ

## ಪುಟ್ಟ ಮರಿಗಳ ಚುಂಬಕ ಪ್ರತಿಭೆ

ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್' ಹೊಸ ಕಂತಿನ ಮೊದಲ ದಿನವೇ ಪುಟ್ಟ ಪುಟ್ಟ ಮಕ್ಕಳು ಅದ್ಭುತವಾಗಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದವು. ಆ ಮಕ್ಕಳ ನಟನೆ ವೀಕ್ಷಕರನ್ನು ಮಂತ್ರಮುಗ್ಧರನ್ನಾಗಿ ಮಾಡಿತು. ಅದರಲ್ಲೂ ಕೆಲವು ಮಕ್ಕಳು ನೋಡಿ ಕಲಿತು ಯಾರಿಗೂ ಕಮ್ಮಿ ಇಲ್ಲದ ಹಾಗೆ ನಟಿಸಿದರು. ವಾರಾಂತ್ಯದಲ್ಲಿ ಒಳ್ಳೆಯ ಕಾರ್ಯಕ್ರಮ. ಆದರೆ, ತೀರ್ಪುಗಾರರು ಪುಟ್ಟ ಮಕ್ಕಳನ್ನು ಬಹುವಚನದಿಂದ ಮಾತನಾಡಿಸುವುದರಿಂದ ಮಕ್ಕಳಲ್ಲಿ ಆತ್ಮೀಯತೆ ಮೂಡುವುದಿಲ್ಲ ಅನಿಸುತ್ತದೆ.

—ಭಾರತೀ ಗಂಗಾಧರ್, ಬೆಂಗಳೂರು

## ಹೆಚ್ಚಲಿ ಉತ್ತಮ ಕಾಮಿಡಿ ಶೋ



'ಇದು ಲಾಫಿಂಗ್ ಟೈಮ್' ಉತ್ತಮ ಕಾರ್ಯಕ್ರಮ. 'ಉದಯ ಕಾಮಿಡಿ'ಯಲ್ಲಿ ಪ್ರಸಾರವಾಗುತ್ತಿದೆ. ಎಂ.ಎಸ್. ನರಸಿಂಹಮೂರ್ತಿ ಮತ್ತು ವೈ.ವಿ. ಗುಂಡೂರಾವ್ ಜೊತೆಯಾಗಿ ದೈನಂದಿನ ವಿಷಯಗಳ ವಿವರಣೆಯನ್ನು ಲಘು ಹಾಸ್ಯದ ಮೂಲಕ ವಿವರಿಸುತ್ತಾರೆ. ಇಲ್ಲಿ ನಿರೂಪಕಿ ಸನಾತನಿ ಅವರ ಮಾತುಗಳೂ ಪ್ರಬುದ್ಧವಾಗಿವೆ. ಇಂತಹ ಕಾರ್ಯಕ್ರಮಗಳು ಹೆಚ್ಚಲಿ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಕನ್ನಡ ಕಳೆದಿದೆ, ಹುಡುಕಿಕೊಡುವಿರಾ?

ಈ ಸಲದ ಕಲರ್ಸ್ ಕನ್ನಡದ 'ಬಿಗ್ ಬಾಸ್' ನೋಡಿದರೆ ಕನ್ನಡ ಭುವನೇಶ್ವರಿ ನಿಜಕ್ಕೂ ಆಘಾತಕ್ಕೆ ಒಳಗಾಗುತ್ತಾಳೆ. ಸ್ಪರ್ಧಿಗಳ ಮಾತುಗಳನ್ನು ಕೇಳುತ್ತಿದ್ದರೆ, ಪರಭಾಷೆಯ ಧಾರಾವಾಹಿಯನ್ನು ನೋಡಿದಂತಾಗುತ್ತದೆ. ಈಗಲಾದರೂ ಸಂಬಂಧಿಸಿದ ವ್ಯಕ್ತಿಗಳು ಎಚ್ಚೆತ್ತುಕೊಳ್ಳುವುದು ಒಳ್ಳೆಯದು.

—ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ

## ಮಾನವೀಯತೆ ಮರೆತ ಸ್ಪರ್ಧೆ

ಕಲರ್ಸ್ ಕನ್ನಡದ 'ಬಿಗ್ ಬಾಸ್' ಮನೆಮಂದಿ ಒಟ್ಟಾಗಿ ಕುಳಿತು ನೋಡಲು ಮುಜುಗರ ಅನ್ನಿಸುತ್ತದೆ. ಸ್ಪರ್ಧಿಗಳು ಅಪ್ಪಿಕೊಳ್ಳುವುದು, ಮೈ ನೇವರಿಸುವುದು ಸರಿ ಅನಿಸುವುದಿಲ್ಲ. ಪುರುಷ ಸ್ಪರ್ಧಿಗಳು ಅಂಗಿಯನ್ನು ಕಳಚಿಯೇ ತಿರುಗಾಡುತ್ತಾರೆ. ಇಷ್ಟು ಮಾತ್ರವೇ ಆಗಿದ್ದರೆ ಪರವಾಗಿರಲಿಲ್ಲ. ಇತ್ತೀಚೆಗೆ ಅವರು ಮಾನವೀಯತೆಯನ್ನೇ ಮರೆಯುತ್ತಿದ್ದಾರೆ. ಇಪ್ಪತ್ತು ಹಸಿಮೆಣಸಿನಕಾಯಿ ತಿನ್ನಿಸುವುದು, ಈಜು ಬಾರದವರಿಗೆ ಈಜುವಂತೆ ಹೇಳುವುದು ಹುಡುಗಾಟವೇ! ಅವರ ಆರೋಗ್ಯದ ಮೇಲೆ ಪರಿಣಾಮ ಬೀರುವುದಿಲ್ಲವೇ! ಗೆಲ್ಲಬೇಕೆಂಬ ಆಸೆಯಿಂದ ತಿನ್ನುವ ಮುನ್ನ ಅದರ ಅನನುಕೂಲತೆಯನ್ನು ತಿಳಿದುಕೊಂಡು ಅದನ್ನು ತಿರಸ್ಕರಿಸಬೇಕಿತ್ತು.

—ಪುಷ್ಪ ಎನ್.ಕೆ. ರಾವ್

## ಮಹಿಳಾ ಶಿಕ್ಷಣ ಎಂದರೆ ಏನು?

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಎರಡನೇ ದರ್ಜೆ ಪ್ರಜೆಯಾಗಿಯೇ ಕಷ್ಟಗಳನ್ನು ಅನುಭವಿಸುತ್ತಿದ್ದಾಳೆ. ಶಿಕ್ಷಣ ಮತ್ತು ಆರ್ಥಿಕ ರಂಗದಲ್ಲಿ ಸಮಾನತೆ ಇಲ್ಲದೆ ಹೆಣ್ಣು ಶೋಷಣೆಗೊಳಗಾಗಿದ್ದಾಳೆ. ಆದರೂ ಪರಂಪರೆ ಹಾಗೂ ಸಂಸ್ಕಾರಗಳಿಗೆ ತಾಯಿಯೇ ಮೂಲ. ಮಕ್ಕಳಿಗೆ ಆಕೆಯೇ ಮೊದಲ ಗುರು. ಇದೆಲ್ಲಾ ಏಕೆ ಹೇಳುತ್ತಿದ್ದೇನೆ ಎಂದರೆ – 'ಅನುಪಮಾ' ಮತ್ತು 'ಭಾಗ್ಯಲಕ್ಷ್ಮಿ' ಧಾರಾವಾಹಿಗಳಲ್ಲಿ ಈ ರೀತಿಯ ಕಷ್ಟಗಳನ್ನು ಹೆಣ್ಣು ಅನುಭವಿಸುವ ಚಿತ್ರಣ ಕಾಣುತ್ತಿದೆ.

—ವೀಣಾ ಶಂಕರ್, ಬೆಂಗಳೂರು

## ಪಾರು ಕನ್ನಡ ಪ್ರೇಮಕ್ಕೆ ಚಪ್ಪಾಳೆ

ಝೀ ಕನ್ನಡದ 'ಪಾರು' ಧಾರಾವಾಹಿಯ ಇತ್ತೀಚಿನ ಸಂಚಿಕೆಯೊಂದು ಪ್ರಶಂಸನೀಯವಾಗಿತ್ತು. ಪಾರು ಪಾತ್ರಧಾರಿ ಕನ್ನಡ ವರ್ಣಮಾಲೆಯ ಅಕ್ಷರಗಳ ಉಚ್ಚಾರಣೆ, ಕನ್ನಡ ಭಾಷೆಯ ಬಳಕೆಯ ವಿಚಾರಗಳನ್ನು ಹೇಳಿದ್ದು ಅಭಿಮಾನದ ಸಂಗತಿ ಎನಿಸಿತು. ಇಂದಿನ ಕಂಗ್ಲಿಷ್‌ಮಯ ಸಂಭಾಷಣೆಗಳೇ ತುಂಬಿರುವ ಧಾರಾವಾಹಿಗಳ ಮಧ್ಯೆ ಈ ಸಂಚಿಕೆಯ ಸನ್ನಿವೇಶ ಮರಳುಗಾಡಿನಲ್ಲಿ ಓಯಸಿಸ್ ಕಂಡಂತೆ ಎನ್ನಿಸಿತು.

—ಶಿವಲೀಲಾ ಬಿ.ಎಸ್., ಮುಧೋಳ

## ಹಿಂಸೆಯ ದೃಶ್ಯಗಳು ಬೇಡ

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ'ಯಲ್ಲಿ ತಾಂಡವ್ ತನ್ನ ಹೆಂಡತಿಗೆ ಹೊಡೆಯುತ್ತಾನೆ. ಇದು ಯಾವ ರೀತಿಯಿಂದಲೂ ಸರಿಯಾದ ನಡವಳಿಕೆ ಅಲ್ಲ. ಹಾಗಾಗಿ ಸಮರ್ಥಿಸುವುದು ಸಮಂಜಸವಲ್ಲ. ತಾಂಡವ್ ಕೈಗೆ ಅವನ ತಾಯಿ ಬರೆ ಹಾಕುವುದು ಕೂಡ ಅಷ್ಟೆ. ಕುಟುಂಬದಲ್ಲಿ ದೈಹಿಕ ಹಿಂಸೆ ಕೊಡುವುದು, ಮನೆಯಿಂದ ಹೊರಹಾಕುವುದು, ನಂತರ ಆತ ತಾಯಿ ಮತ್ತು ಹೆಂಡತಿಯ ಮೇಲಿನ ಕೋಪಕ್ಕೆ ಮದ್ಯಪಾನ ಮಾಡುತ್ತಾನೆ. ಇದೆಲ್ಲವೂ ಸಮಾಜಕ್ಕೆ ಕೆಟ್ಟ ಸಂದೇಶವನ್ನು ನೀಡುತ್ತದೆ. ಇಂತಹ ದೃಶ್ಯಗಳಿಗೆ ಕತ್ತರಿ ಹಾಕಲೇಬೇಕು.



—ಪಿ.ಹೆಚ್. ಪಾಟೀಲ್, ರಾಣೆಬೆನ್ನೂರು

## ಯುವನಟನ ಬದಲಾವಣೆ ದುರದೃಷ್ಟಕರ

ಕಲರ್ಸ್ ಕನ್ನಡದ 'ಬೃಂದಾವನ' ಶುರುವಾಗಿ ಇನ್ನೂ ಕೆಲವು ದಿನಗಳಾಗಿವೆ ಅಷ್ಟೆ. ಆಗಲೇ ನಾಯಕ ನಟನನ್ನು ಬದಲಾಯಿಸಿದ್ದಾರೆ. ಒಬ್ಬ ಪಾತ್ರಧಾರಿಯನ್ನು ಆಡಿಷನ್ ಮಾಡಿ ಆಯ್ಕೆ ಮಾಡಿಕೊಂಡಿದ್ದರೂ ಕೆಲವೇ ದಿನಗಳಲ್ಲಿ ಅವರ ನಟನೆಗೆ ಕತ್ತರಿ ಬಿದ್ದಿದೆ. ಹಾಗೆಂದು ಹೊಸ ನಟ ಅಭಿನಯವನ್ನು ಚೆನ್ನಾಗಿ ಮಾಡುತ್ತಿಲ್ಲ ಎಂದರ್ಥವಲ್ಲ. ಮೊದಲಿದ್ದವರು ಚಿಕ್ಕ ಹುಡುಗನಂತೆ ಕಾಣಿಸುತ್ತಿದ್ದರು. ಅವರು ಮದುಮಗನ ಪಾತ್ರಕ್ಕೆ ಸೂಕ್ತವಲ್ಲ ಎಂದು ನಮಗೆ ಅನ್ನಿಸಿದ್ದಂತೂ ನಿಜ. ಅವರ ಅಭಿನಯ ಆ ಪಾತ್ರಕ್ಕೆ ಯೋಗ್ಯವಾಗಿತ್ತು. ಹೀಗಿದ್ದೂ ನಟನನ್ನು ಬದಲಾಯಿಸಿದ್ದು ಸೂಕ್ತವಲ್ಲ.

—ಶ್ರುತಿ, ಬೆಂಗಳೂರು

## ಕ್ಯಾಮೆರಾ ಕಣ್ಣು ಗಾಯಕರ ಮೇಲಿರಲಿ

ಝೀ ಕನ್ನಡದ 'ಸರಿಗಮಪ' ಚೆನ್ನಾಗಿ ಮೂಡಿಬರುತ್ತಿದೆ. ಈ ಕಾರ್ಯಕ್ರಮದಲ್ಲಿ ಕ್ಯಾಮೆರಾ ಕಣ್ಣು ಸ್ಪರ್ಧಿಗಿಂತ ಹೆಚ್ಚಾಗಿ ನಿರೂಪಕಿಯ ಹಾವ–ಭಾವಕ್ಕೆ ಹೆಚ್ಚು ಒತ್ತು ಕೊಟ್ಟಂತೆ ಕಾಣುತ್ತದೆ. ಹಾಗೆಯೇ ತೀರ್ಪುಗಾರರಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಂತೆ ಅನ್ನಿಸುತ್ತದೆ. ಅವರ ಪ್ರತಿಕ್ರಿಯೆ ಕೂಡ ತುಸು ಹೆಚ್ಚು ಅನಿಸುತ್ತದೆ.

—ರಮಾನಂದ ಶರ್ಮಾ, ನವದೆಹಲಿ